ದಾಯಾದಿಗಳ ಈ ವಿರಸದ ಪ್ರಸಂಗ ಗೊತ್ತಿದ್ದರಿಂದ ಆ ಕುರಿತು ವೃಥಾ ಮಾತು ಖರ್ಚು ಮಾಡುವವರ ಸಂಖ್ಯೆ ಕೂಡಾ ಕಡಿಮೆಯಾಗಿತ್ತು. ಇದೂ ಒಂದು ಅನುಕೂಲವಾಗಿತ್ತು ದಾಯಾದಿಗಳಿಗೆ. ಹೀಗಿರುವಾಗ, ಒಂದು ಬೆಳಿಗ್ಗೆ ಯಾವತ್ತಿನಂತೆ ಬೆಳಕು ಬಿಡುವ ಮುನ್ನವೇ ಎದ್ದು, ಮುಖ ತೊಳೆದ ನಂತರದ ದಿನದ ಮೊಟ್ಟ ಮೊದಲ ಕೆಲಸವಾದ ವಾಸ್ತುಬಾಗಿಲಿನ ಹೊಸ್ತಿಲು ವರೆಸಿ, ರಂಗೋಲಿ ಎಳೆ ಹಾಕಿ, ಅರಿಸಿನ, ಕುಂಕುಮ ಹಚ್ಚಿ ಕೈ ಮುಗಿಯುವ ಕಾರ್ಯವನ್ನು ಪೂರ್ಣಗೊಳಿಸಿದ ಸೀತಾಲಕ್ಷ್ಮಿ ಮುಂಚೇಕಡೆಯ ಬಾಗಿಲು ತೆಗೆದವಳು ಬೆಚ್ಚಿ ಬಿದ್ದಳು.

'ರೀ, ಬನ್ರೀ ಇಲ್ಲಿ' ಎಂದು ಅವಳು ಕರೆದ ಜೋರಿಗೆ ಶಿವರಾಮ ಮಾತ್ರ ಅಲ್ಲ, ಇನ್ನೂ ಮಲಗಿದ್ದ ಮಕ್ಕಳೂ ಎಚ್ಚೆತ್ತು ಓಡಿ ಬಂದರು. ಮೆಟ್ಟಿಲ ಕೆಳಗೆ ಉದ್ದಕ್ಕೆ ಒಂದು ಚಾಪೆ ಹಾಸಿದೆ. ಅದರ ಮೇಲೆ ಒಂದು ಕೃಶ ಶರೀರ ಮಲಗಿದೆ ಎಂದು ಗೊತ್ತಾಗದ ಹಾಗೆ ಮೈಮೇಲೊಂದು ದಪ್ಪನೆಯ ಬೆಡ್ ಶೀಟು. ಮುಖ ಮುಖ ನೋಡಿಕೊಂಡರು ಗಂಡ, ಹೆಂಡತಿ. ಮಕ್ಕಳಿಗೆ ಗಾಬರಿ.

'ಅತ್ತೇ' ಎನ್ನುತ್ತಾ ಮಲಗಿದ ಜೀವವನ್ನು ಅಲುಗಾಡಿಸಿ ಎಚ್ಚರಿಸಲು ಪ್ರಯತ್ನಿಸಿದಳು ಸೀತಾಲಕ್ಷ್ಮಿ.

'ಸೊಕ್ಕು ಅಂದ್ರೆ ಇಷ್ಟ್ರಮಟ್ಟಿಗಾ? ತಗೊಂಡ್ಹೋಗಿ ಅಲ್ಲೇ ಮಲಗಿಸಿ ಬರ್ತೀನಿ' ಎನ್ನುತ್ತಾ ಮೊಣಕಾಲವರೆಗೆ ಪಂಚೆ ಎತ್ತಿ ಕಟ್ಟಿಕೊಂಡ ಶಿವರಾಮ. ಮಗ್ಗುಲಾಗಿ ಮಲಗಿದ್ದ ಜೀವ ಅಂಗಾತವಾಯ್ತು. ಬಳಲಿ ಜೋತುಬಿದ್ದಿದ್ದ ಕೈಗಳು ನಿಧಾನಕ್ಕೆ ಮೇಲೆದ್ದು ನಮಸ್ಕರಿಸುವ ಭಂಗಿಯಲ್ಲಿ ಕೂಡಿಕೊಂಡುವು. ಮರುನಿಮಿಷ ಕೈ ಸೋತು ಕುಸಿದುವು.

'ಯಾರಿದು ಅಮ್ಮಾ?' ಕೇಳುತ್ತಿದ್ದಾರೆ ಮಕ್ಕಳು.

'ದೊಡ್ಡಮ್ಮ ಕಣ್ರೋ, ನಿಮ್ಮ ದೊಡ್ಡಮ್ಮ...'

'ಅಂದ್ರೆ?' ಕೇಳಿದ ಪ್ರದೀಪ.

'ಏ, ಅಷ್ಟೂ ಗೊತ್ತಾಗಲ್ವನೋ? ದೊಡ್ಡಮ್ಮ ಅಂದ್ರೆ ಅಪ್ಪನ ಅಮ್ಮ...' ತಮ್ಮನಿಗೆ ತಿಳಿಸಿ ಹೇಳಿದ ಪ್ರಸನ್ನ.

'ಇದೆಂತಾ ಕತೇನ್ರೀ? ಹಿಂಗೆ ಮನೆಬಾಗ್ಲಲ್ಲಿ ತಂದು ಮಲಗಿಸಿ ಹೋಗಿದಾರಲ್ಲ, ಮನುಷ್ರಾ ಇವರು? ಎತ್ಕೊಳಿ, ಒಳಗೆ ತಗೊಂಡ್ಹೋಗಿ ಮಲಗಿಸೋಣ...' ಗದ್ಗದ ಕಂಠದಿಂದ ಉಸುರಿದಳು ಸೀತಾಲಕ್ಷ್ಮಿ.

'ಹುಷಾರ್, ಈ ವಿಷಯದಲ್ಲಿ ನೀನು ತಲೆ ಹಾಕ್ಕೊಂಡು ಬರ್ಬೇಡ. ಇವತ್ತು ಅವನಿಗೊಂದು ಗತಿ ಕಾಣಿಸ್ದಿದ್ರೆ ನಾನು ಅಪ್ಪನಿಗೆ ಹುಟ್ಟಿದೋನೇ ಅಲ್ಲ. ನನ್ನ ಕೈಲಾಗಲ್ಲ ಅಂತ ತಂದು ಬಿಸಾಡೋನಾಗಿದ್ರೆ ಹಗಲು ಹೊತ್ತಲ್ಲಿ ಗಂಡಸಿನ ಹಂಗೆ ಬಿಟ್ಹೋಗ್ಬೇಕಿತ್ತು. ಕಳ್ಳರ ಥರ ರಾತ್ರಿ ಹೊತ್ತಲ್ಲಿ ತಂದು ಮಲಗಿಸಿ ಹೋಗಿದಾನೆ ಅಂದ್ರೆ ಕಣ್ಣಲ್ಲಿ ರಕ್ತ ಉಂಟಾ? ನಾಕು ಜನ ಅಪ್ಪಂತೋರು ಇದು ನ್ಯಾಯಾನಾ ಅಂತ ಹೇಳ್ಲಿ'

'ದಮ್ಮಯ್ಯ ಕಣ್ರೀ, ಹೆತ್ತ ಅಮ್ಮನನ್ನ ನೋಡ್ಕಳ್ಳೋಕೆ ನ್ಯಾಯ ಕೇಳ್ಬೇಕಾ? ದೇವ್ರು ಮೆಚ್ತಾನಾ? ಇಷ್ಟು ವರ್ಷ ಅವ್ರು ನೋಡ್ಕಂಡಿದಾರೆ. ಇನ್ನು ಉಸಿರಿರೋವರೆಗೆ ನಾವು ನೋಡ್ಕಳ್ಳೋಣ. ನಮಗೂ ಕರ್ತವ್ಯ ಅನ್ನೋದಿರುತ್ತೆ...'

ಶಿವರಾಮನ ಕೋಪ ತಣಿಯುವ ಲಕ್ಷಣ ಕಾಣಿಸಲಿಲ್ಲ.

'ಅವನ ಬಾಲ ಹಿಡಿದು ಹೋಗು ಅಂತ ನಾನು ಹೇಳಿದ್ನಾ? ಹೋದ ಮೇಲೆ ಅನುಭವಿಸ್ಬೇಕು. ನೀನು ಒಳಗೆ ನಡಿ. ಯಜಮಾನಿಕೆ ಮಾಡ್ಕಂಡು ಬರ್ಬೇಡ...' ಸೀತಾಲಕ್ಷ್ಮಿಯನ್ನು ಒಳಗೆ ಹೋಗುವಂತೆ ದೂಡಿದ ಶಿವರಾಮ. 'ನೀವೂ ಒಳಗೆ ನಡೀರಿ. ಬಾಯಿ ಕಳ್ಕಂಡು ನೋಡ್ತಾ ನಿಂತಿರೋಕೆ ಇಲ್ಲೇನು ಕೋತಿ ಕುಣೀತಿಲ್ಲ...' ಮಕ್ಕಳಿಗೂ ದಬಾವಣೆ ಹಾಕಿದ.

ಅಪ್ಪ ಅಂದರೆ ಯಾವತ್ತೂ ಮಕ್ಕಳಿಗೆ ಸಲಿಗೆ ಇಲ್ಲ. ಆ ಸಲಿಗೆ ಕೊಟ್ಟವನಲ್ಲ ಶಿವರಾಮ. ಹಲ್ಲು ಲೆಕ್ಕ ಮಾಡ್ಕಂತಾರೆ ಎಂದು ಮಕ್ಕಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡವನು. ಅವನ ಆಜ್ಞೆ ಮೀರಲಾಗದೆ ಮಕ್ಕಳು ಒಳಗೆ ದಾಟಿದರು. ಇನ್ನೂ ಅಲ್ಲೇ ನಿಂತಿದ್ದಳು ಸೀತಾಲಕ್ಷ್ಮಿ. ಅವಳ ಕಣ್ಣುಗಳಿಂದ ದಳಗುಟ್ಟಿ ನೀರಿಳಿಯುತ್ತಿತ್ತು.

'ನೋಡಿ, ನಿಮ್ಮ ಕಾಲಿಗೆ ಬೇಕಾರೂ ಬೀಳ್ತೀನಿ. ಅತ್ತೆಗೆ ಒಂದು ಮೂಲೇಲಿ ಒಂದಿಷ್ಟು ಜಾಗ ಕೊಡಿ. ನೀವು ಮತ್ತ್ಯಾವ ಚಾಕರೀನೂ ಮಾಡೋದು ಬೇಡ. ನನ್ನ ಕೈಲಾದಷ್ಟು ದಿನ ನಾನು ನೋಡ್ಕಂತೀನಿ...'

ಶಿವರಾಮ ಅವಳ ಕಡೆ ದುರುಗುಟ್ಟಿದ. ತುಟಿಯ ಮೇಲೆ ತೋರುಬೆರಳಿಟ್ಟುಕೊಂಡು ಚುಪ್ ಎನ್ನುವಂತೆ ಸೈಗೆ ಮಾಡಿದ. ಕೆಳಗೆ ಬಗ್ಗಿ ಅಮ್ಮನನ್ನು ಎತ್ತಿಕೊಂಡಾಗ ಒಂದು ಹೂವಿನ ಸರ ಎತ್ತಿದಷ್ಟು ಹಗುರ. ಮಾಂಸಖಂಡಗಳೆಲ್ಲಾ ಕರಗಿ ಹೋಗಿ ಎಲುಬು, ಚರ್ಮ ಆಗಿದ್ದಾರೆ ವೆಂಕಮ್ಮ. ಎತ್ತಿದರೆ ಕೈಗೆ ಅಣೆಯುತ್ತದೆಯೇನೋ ಎನ್ನುವಷ್ಟು ಮೂಳೆ ಬಿಟ್ಟುಕೊಂಡಿದ್ದಾರೆ. ತಲೆಯ ಮೇಲಿನ ಸೆರಗು ಸರಿದು ಹತ್ತಿಯಂತೆ ಬೆಳ್ಳಗಾದ ಮುಳ್ಳು ಮುಳ್ಳು ಕೂದಲು ಕಣ್ಣಿಗೆ ರಾಚುತ್ತಿದೆ. ಬಗ್ಗಿ ಅಮ್ಮನನ್ನು ಎತ್ತುವಾಗ ಅಮ್ಮ ಮಗನ ಕಣ್ಣುಗಳ ದೃಷ್ಟಿ ಒಂದಾದುವು. ಶಿವರಾಮನ ಕೈ ನಡುಗಿತು. ಅಪ್ಪ ಸತ್ತಾಗ ಕಂಡ ಅದೇ ಅಸಹಾಯಕತೆ ಅಮ್ಮನ ಕಣ್ಣುಗಳಲ್ಲಿ. ಅವನಿಗೇ ಅರಿವಿಲ್ಲದೆ ಕಣ್ಣಲ್ಲಿ ನೀರು ಬಂತು. ಕಂಠ ಬಿಗಿಯಿತು. ಹೊತ್ತು ಹೆತ್ತಿದ್ದಕ್ಕೆ, ಸಾಕಿ ಸಲಹಿದ್ದಕ್ಕೆ ಈ ಶಿಕ್ಷೆ ಅನ್ನುವುದಾದರೆ ಯಾಕೆ ಬೇಕು ಮಕ್ಕಳು? ಅನ್ನುವ ಭಾವ ಕಾಡಿತು. 'ಈ ಜಗತ್ತಿನಲ್ಲಿ ಯಾರೂ ಸಂಪೂರ್ಣ ಕೆಟ್ಟವರಾಗಿರುವುದಿಲ್ಲ, ಸಂಪೂರ್ಣ ಒಳ್ಳೆಯವರೂ...' ಎನ್ನುವ ಹೇಳಿಕೆ ಮಾತು ಶಿವರಾಮನ ವಿಷಯದಲ್ಲಿ ನಿಜವಾಯ್ತು. ಅಮ್ಮನನ್ನು ಹಸುಗೂಸೆಂಬಂತೆ ತೋಳುಗಳಲ್ಲಿ ಎತ್ತಿಕೊಂಡು ಒಳಗೆ ನಡೆದ ಶಿವರಾಮ.

***

ಸತ್ಯ ಸಂಗತಿಯನ್ನು ಬಿಟ್ಟು ಕೊಡಲಿಲ್ಲ ಶಿವರಾಮ. ಹಾಗೆ ಬಿಟ್ಟುಕೊಡಲು ಸೀತಾಲಕ್ಷ್ಮಿ ಆಸ್ಪದ ಕೊಡಲಿಲ್ಲ. 'ನೋಡಿ, ಹಿಂಗ್ಹಿಂಗಾಯ್ತು ಅಂತ ನೀವು ಡಂಗುರ ಸಾರ್ಕಂಡು ಬರ್ಬೇಡಿ. ಅವನು ಎದುರಿಗೆ ಕಂಡ್ರೂ ಕೇಳೋಕೆ ಹೋಗ್ಬೇಡಿ. ಅವನಿಗೇ ಒಂಥರಾ ಆಗ್ಬೇಕು, ಹಂಗಿದ್ಬಿಡಿ. ಮಾಡಿದೋರ ಪಾಪ ಆಡಿದೋರ ಬಾಯಲ್ಲಿ ಅನ್ನೋ ಹಂಗೆ ಮಾಡಿದ್ಬೇಡಿ. ಅತ್ತೆಗೆ ಈ ವಯಸ್ಸಲ್ಲಿ ಏನಾಗ್ಬೇಕಿದೆ ಹೇಳಿ? ತಿನ್ನೋಕೆ ಒಂದು ತುತ್ತು ಅನ್ನ. ಮಲಗೋಕೆ ಒಂದು ಮೂಲೆ. ಎರಡು ಒಳ್ಳೇ ಮಾತು. ಕೊನೇ ಗಳಿಗೇಲಿ ಹಿರೀರ ಸೇವೆ ಮಾಡಿದ ಪುಣ್ಯ ನಮಗೆ ಬರ್ಲಿ. ಆ ಪುಣ್ಯ ನಮ್ಮ ಮಕ್ಕಳನ್ನ ಕಾಪಾಡ್ಲಿ' ಇಷ್ಟನ್ನೆಲ್ಲಾ ಒಟ್ಟೊಟ್ಟಿಗೆ ಸೀತಾಲಕ್ಷ್ಮಿ ಗಂಡನಿಗೆ ಹೇಳಿದಳು ಅಂತಲ್ಲ. ಆಗ, ಈಗ ಇಂಥ ಮಾತಾಡಿ ಗಂಡನನ್ನು ಹದ ಮಾಡುತ್ತಿದ್ದಳು. 'ಏನಾರೂ ಕುಣಿ...' ಎನ್ನುವ ಮಾತಾಡುವಷ್ಟು ಹಾದಿಗೆ ಬಂದಿದ್ದ ಶಿವರಾಮ. ಅಮ್ಮನಿಗೆ ಸೇರಿದ್ದನ್ನೆಲ್ಲಾ ನುಂಗಿ ಹಾಕಿದ ಪಾಪಪ್ರಜ್ಞೆ ಕಿಂಚಿತ್ತಾದರೂ ಕೆಲಸ ಮಾಡಿರಬಹುದು. ಅಥವಾ ಕೊನೆಗೂ ನಮ್ಮ ಕಾಲಬುಡವೇ ಬೇಕಾಯ್ತು ಎನ್ನುವ ಅಹಮ್ಮೂ ಸೇರಿಕೊಂಡಿರಬಹುದು.

ವೆಂಕಮ್ಮ ಹಿರಿಮಗನ ಮನೆ ಸೇರಿಕೊಂಡ ಸುದ್ದಿ ಊರ ಮಂದಿಯ ಕಿವಿ ತಲುಪಲು ತಡವಾಗಲಿಲ್ಲ. ಅವರನ್ನು ಮಾತಾಡಿಸಿಕೊಂಡು ಹೋಗುವ ನೆವದಲ್ಲಿ ವಿಷಯ ಒಟ್ಟು ಹಾಕಲು ಕೆಲವರಿಗಾದರೂ ಕುತೂಹಲ. ಅಣ್ಣ, ತಮ್ಮ ಅಂದರೆ ಪುರಾಣಕಾಲದ ಕೌರವ, ಪಾಂಡವರು ಸುಳ್ಳು, ಇವರು ಬದ್ಧ. ಹೀಗಿರುವಾಗ ವೆಂಕಮ್ಮನನ್ನು ಈ ಮನೆಗೆ ಕರೆದುಕೊಂಡು ಬಂದಿದ್ದು ಯಾರು? ಶಿವರಾಮ ತಾನಾಗಿ ಹೋಗಿ ಕರೆದುಕೊಂಡು ಬಂದನೋ, ಅಥವಾ ವೆಂಕಟರಾಮ ಬಿಟ್ಟುಹೋದನೋ?

'ಎಂತಾರಾಗ್ಲಿ, ಒಳ್ಳೇ ಕೆಲಸ ಮಾಡಿದ್ರಿ ಮಾರೇರಾ. ಅಲ್ಲಿ ಹುರಿದು ಮುಕ್ತಿದ್ರಂತೆ' ಎನ್ನುವಲ್ಲಿಂದ ಶುರು. 'ನಿಮಗೆ ಯಾರು ಹೇಳಿದ್ದು?' ಎಂದು ಕೇಳಬೇಕಾಗಿರಲಿಲ್ಲ. ಊರಿಡೀ ಗೊತ್ತಿದ್ದ ಗುಟ್ಟು. ಕೈಕಾಲು ಗಟ್ಟಿ ಇದ್ದು ಅವರ ಕೆಲಸ ಅವರು ಮಾಡಿಕೊಳ್ಳುವವರೆಗೆ ವೆಂಕಮ್ಮ ಹೇಗೋ ಬದುಕಿಕೊಂಡರು. ಆದರೂ ಮುಸುಕಿನೊಳಗಿನ ಗುದ್ದಿನ ಹಾಗೆ ಕಾಟ ಇದ್ದೇ ಇತ್ತು. ಮೈ ತೊಳೆಯಲು ಹೋದರೆ ಹಂಡೆಯಲ್ಲಿ ಬಿಸಿನೀರು ಚೊಟಚೊಟ. ನೀರಿದ್ದರೂ ಮೈಗೆ ಹಾಕುವ ಸಾಬೂನು ನಾಪತ್ತೆ. ಬಟ್ಟೆ ಸೋಪನ್ನಾದರೂ ಉಜ್ಜಿಕೊಂಡು ಮೈ ತೊಳೆಯೋಣವೆಂದರೆ ಒಂದು ಗೆರೆ ಸೋಪಿಗೆ ಗತಿ ಇಲ್ಲ. ಸೋಪಿನ ಮುಖ ತೋರಿಸದೆ ಹಾಗೆ ಹಾಗೇ ಒಗೆದುಕೊಂಡ ಸೀರೆಯನ್ನು ಮುರೀ ಹಿಂಡಲು ಸಹಾ ಕೈಗಳಲ್ಲಿ ಬಲ ಸಾಲದೆ ನೀರಿಳಿಯುವಂತೆಯೇ ಒಣಗಿಸಿದ ಸೀರೆ, ಬಟ್ಟೆಗಳಿಂದ ಮುಗ್ಗಲು ವಾಸನೆ.

'ಅಪ್ಪಂತೋರು ಬಂದ್ರೆ ಅಸಂಯ್ಯ ಆಗುತ್ತೆ. ನೀವು ಎದುರು ಬಂದು ಕೂತ್ಗಂಬೇಡಿ...' ಅನ್ನುತ್ತಿದ್ದಳಂತೆ ಕನಕ. ದಿನದಲ್ಲಿ ಒಂದೇ ಊಟ ಉಣ್ಣುವ ವೆಂಕಮ್ಮನಿಗೆ ರಾತ್ರಿ ಅವಲಕ್ಕಿಗೆ ಕಲಸಿಕೊಳ್ಳಲು ಒಂದು ಸೌಟು ಮಜ್ಜಿಗೆಗೆ ಬರ. ನೀರು ಹಾಕಿ ಅವಲಕ್ಕಿ ನೆನೆಸಿಕೊಂಡು ತಿನ್ನುತ್ತಿದ್ದರಂತೆ ವೆಂಕಮ್ಮ. ಮನೆಯಲ್ಲಿ ವೈದಿಕವೋ, ಸತ್ಯನಾರಾಯಣವೋ ಏನೋ ಒಂದು ನಡೆದರೆ ವೆಂಕಮ್ಮ ಮಧ್ಯಾಹ್ನ ಊಟಕ್ಕೆ ಕೂತಾಗ ಎಷ್ಟು ತಿಂದರೋ ಅಷ್ಟೇ ಲಭ್ಯ. ವಿಶೇಷದ ಭಕ್ಷ್ಯಗಳನ್ನು ಮೂರು ಮೂರು ದಿನ ಇಟ್ಟುಕೊಂಡು ಮನೆಮಂದಿ ತಿಂದರೂ ವೆಂಕಮ್ಮನವರೆಗೆ ಅದರ ವಾಸನೆ ಹೋಗುತ್ತಿರಲಿಲ್ಲ.

(ಸಶೇಷ)